ಓ.ಎಸ್. ನಂಃ 92/2022
ಡಿ.ಡಬ್ಲ್ಯೂ-2(ಮಹಾದೇವಿ)

ಮಧ್ಯಂತರ ಅರ್ಜಿ-17ರ ಆದೇಶದ ಮೇರೆಗೆ ದಿನಾಂಕ: 17-04-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಬಿ.ಎಚ್.ಎನ್. ವಾದಿ ಪರ ವಕೀಲರಿಂದಃ**

ನಾನು ವಿದ್ಯಾಭಾಸ ಮಾಡಿಲ್ಲ. ನನ್ನ ಗಂಡನಿಗೆ ಜಮೀನು ಇರುವುದಿಲ್ಲ, ಒಂದು ಮನೆ ಇದೆ, ಎರಡು ಖುಲ್ಲಾ ಜಾಗಾಗಳಿದ್ದು ಅವುಗಳ ಪೈಕಿ ಈಗ ಒಂದು ಮಾರಾಟ ಮಾಡಿದ್ದೇವೆ. ಮಾರಾಟ ಮಾಡಿದ ಖುಲ್ಲಾ ಜಾಗಾ ನಂಬರ 1443 ಇರುತ್ತದೆ. ಇನ್ನೊಂದು ಖುಲ್ಲಾ ಜಾಗಾದ ನಂಬರ ನನಗೆ ನೆನಪಿಲ್ಲ. ಮನೆ ನಂಬರ ನನಗೆ ನೆನಪಿಲ್ಲ.

2. ಈ ದಾವೆಯನ್ನು ಯಾರು ಯಾರ ಮೇಲೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯನ್ನು ಯಾವ ಯಾವ ಆಸ್ತಿಗಳ ಮೇಲೆ ಸಲ್ಲಿಸಿದ್ದಾರೆಂದು ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಆಸ್ತಿಗಳ ಚಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಿಲ್ಲ. 3ನೇ ಪ್ರತಿವಾದಿ ನನಗೆ ಸಾಕ್ಷಿ ನುಡಿಯಲು ಕರೆದಿದ್ದರಿಂದ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ. 3ನೇ ಪ್ರತಿವಾದಿಗೆ ಸಹಾಯ ಮಾಡಲು ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ, ಇದನ್ನು ಹೊರತುಪಡಿಸಿ ನನಗೆ ಬೇರೆ ಏನು ಗೊತ್ತಿಲ್ಲ.

3. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದ

ವಿಷಯ ನನ್ನ ಮಾವನಿಗೆ ಗೊತ್ತಿದೆ. 3ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ